**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ**

**ಎಸ್.ಸಿ. ನಂಃ 01/2018**

ಪ್ರಾಸಾ ಃ 17 (ಚಾಸಾ ಃ24 )

ಪ್ರಮಾಣೀಕರಿಸಿದ ದಿನಾಂಕಃ **01-09-2018**

ಹೆಸರು ಃ ಎ. ಸುಧಾಕರ್‌ರೆಡ್ಡಿ

ತಂದೆಯ ಹೆಸರು ಃ ಅಂಜನರೆಡ್ಡಿ

ವಯಸ್ಸು ಃ 40 ವರ್ಷ

ಕೆಲಸ ಃ ಸಿಪಿಐ, ಮುಳಬಾಗಿಲು

ವಾಸ ಃ ಮುಳಬಾಗಿಲು

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನಾನು ಮಾರ್ಚ್ 2017 ರಿಂದ ಇಲ್ಲಿಯವರೆಗೆ ಮುಳಬಾಗಿಲು ವೃತ್ತದ ಸಿಪಿಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 03-10-2017 ರಂದು ಎಎಸ್‌ಐ ಗ್ರಾಮಾಂತರ ಠಾಣೆ ರವರಿಂದ ಕಡತ ಪಡೆದು ಪರಿಶೀಲಿಸಿದೆ. ಅದೇ ದಿನ ಆರೋಪಿಯ ಪತ್ತೆಗಾಗಿ ಮುಖ್ಯಪೇದೆ 07 ಶ್ರೀನಿವಾಸ್ ಹಾಗೂ ಪೇದೆ ಪ್ರಶಾಂತ್ ರವರನ್ನು ನೇಮಿಸಿದೆ. ಅವರು ಮದ್ಯಾಹ್ನ 3.00 ಗಂಟೆಗೆ ಆರೋಪಿಯನ್ನು ಹಾಜರುಪಡಿಸಿ ವರದಿ ನೀಡಿದ್ದು, ಅದರಲ್ಲಿರುವ ಸಹಿಯನ್ನು ನಿಪಿ 18(ಬಿ) ಎಂದು ಗುರುತಿಸಲಾಯಿತು. ಆರೋಪಿಯ ವಿಚಾರಣೆ ಮಾಡಿ ಸ್ವ ಇಚ್ಛಾ ಹೇಳಿಕೆ ಪಡೆದುಕೊಂಡೆ. ಅದೇ ದಿನ ಮುಳಬಾಗಿಲು ಸರ್ಕಾರಿ ಆಸ್ಪತ್ರೆಗೆ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಟ್ಟೆ. ನ್ಯಾಯಾಲಯದ ಮುಂದೆ ಅದೇ ದಿನ ಹಾಜರುಪಡಿಸಿದೆ.

ದಿಃ 04-10-2017 ರಂದ ಸಾಕ್ಷಿದಾರರಾದ ವೆಂಕಟರೆಡ್ಡಿ, ಲಕ್ಷ್ಮಿದೇವಮ್ಮ, ನಾರಾಯಣಸ್ವಾಮಿ, ಸುನಿತಮ್ಮ, ನಾಗಪ್ಪ, ಹನುಮಂತಪ್ಪ ರವರ ಹೇಳಿಕೆ ಮಾಡಿಕೊಂಡೆ. ದಿಃ 06-10-2017 ರಂದು ನೊಂದ ಬಾಲಕಿಯ ಜಾಲಪ್ಪ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು ಕೃತ್ಯ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪಂಚರಾದ ರೆಡ್ಡಪ್ಪ ಮತ್ತು ಮಂಜುನಾಥರವರ ಸಮಕ್ಷಮ ಪಂಚನಾಮೆ ಮಾಡಿದ್ದು, ಅದರಲ್ಲಿರುವ ಸಹಿಯನ್ನು ನಿಪಿ 2 (ಡಿ) ಎಂದು ಗುರುತಿಸಲಾಯಿತು.

ನೊಂದ ಬಾಲಕಿಗೆ ವಿಷ ಕುಡಿಸಿದ ಜಾಗವನ್ನು ಆಕೆ ತೋರಿಸಿದ್ದು, ಅಲ್ಲಿ ಸಾಕ್ಷಿದಾರರಾದ ಮಂಜುನಾಥ ಮತ್ತು ಆನಂದ್ ರವರ ಸಮಕ್ಷಮ ಮದ್ಯಾಹ್ನ 12.00 ರಿಂದ 12.45 ರವರೆಗೆ ಪಂಚನಾಮೆ ಮಾಡಿದ್ದು, ಅದರಲ್ಲಿರುವ ಸಹಿಯನ್ನು ನಿಪಿ 3 (ಡಿ) ಎಂದು ಗುರುತಿಸಲಾಯಿತು. ದಿಃ

08-10-2017 ರಂದು ಮಹಿಳಾ ಪೇದೆ ಸುಧಾರಾಣಿ ರವರು ಜಾಲಪ್ಪ ಆಸ್ಪತ್ರೆಯಿಂದ ನೊಂದಬಾಲಕಿಯಿಂದ ವೈದ್ಯರ ಸಂಗ್ರಹಿಸಿ ಕೊಟ್ಟಿದ್ದ ವಸ್ತುಗಳನ್ನು ಹಾಗೂ ವೈದ್ಯಕೀಯ ವರದಿಯನ್ನು ತಂದು ಹಾಜರುಪಡಿಸಿ ವರದಿ ನೀಡಿದ್ದು, ಅದರಲ್ಲಿರುವ ಸಹಿಯನ್ನು ನಿಪಿ 16 (ಬಿ)ಎಂದು ಗುರುತಿಸಲಾಯಿತು. ವೈದ್ಯಕೀಯ ವರದಿಯಲ್ಲಿರುವ ಸಹಿಯನ್ನು ನಿಪಿ 7 (ಬಿ) ಎಂದು ಗುರುತಿಸಲಾಯಿತು. ಕ್ಷ-ಕಿರಣ ವರದಿಯಲ್ಲಿರುವ ಸಹಿಯನ್ನು ನಿಪಿ 6 (ಬಿ) ಎಂದು ಗುರುತಿಸಲಾಯಿತು.

ಸದರಿ ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆಃ 145/2017 ಕ್ಕೆ ನಮೂದಿಸಿಕೊಂಡಿದ್ದು, ಅದನ್ನು ನಿಪಿ 19 ಎಂದು ಗುರುತಿಸಲಾಯಿತು. ದಿಃ 10-10-2017 ರಂದು ನೊಂದ ಬಾಲಕಿಯನ್ನು ಮುಳಬಾಗಿಲು ನ್ಯಾಯಾಲಯಕ್ಕೆ ಹೇಳಿಕೆ ದಾಖಲಿಸಿಕೊಳ್ಳುವ ಸಲುವಾಗಿ ಕಳುಹಿಸಿಕೊಟ್ಟೆ. ದಿಃ 11-10-2017 ರಂದು ಮುಖ್ಯಪೇದೆ ನಾರಾಯಣಸ್ವಾಮಿ ರವರು ಆರೋಪಿಗೆ ಸಂಬಂಧಪಟ್ಟ ವಸ್ತುಗಳನ್ನು ಮುಳಬಾಗಿಲು ಹಾಗೂ ವೈದ್ಯಕೀಯ ವರದಿಯನ್ನು ತಂದು ಹಾಜರುಪಡಿಸಿ ವರದಿ ನೀಡಿದ್ದು, ಅದನ್ನು ನಿಪಿ 20 ಮತ್ತು ಸಹಿಯನ್ನು ನಿಪಿ 20(ಎ) ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆಃ 146/2017 ಕ್ಕೆ ನಮೂದಿಸಿಕೊಂಡಿದ್ದು, ಅದನ್ನು ನಿಪಿ 21 ಎಂದು ಗುರುತಿಸಲಾಯಿತು. ನಿಪಿ 5 ರಲ್ಲಿರುವ ಸಹಿಯನ್ನು ನಿಪಿ 5 (ಬಿ) ಎಂದು ಗುರುತಿಸಲಾಯಿತು.

ದಿಃ 14-11-2017 ರಂದು ತಲೆಮರೆಸಿಕೊಂಡಿದ್ದ ಉಳಿದ ಆರೋಪಿಗಳು ನ್ಯಾಯಾಲಯದಿಂದ ನಿರೀಕ್ಷಣಾ ಜಾಮಿನು ಪಡೆದು ಹಾಜರಾಗಿದ್ದು, ಅವರನ್ನು ದಸ್ತಗಿರಿ ಮಾಡಿ ನಿಯಮ ಪಾಲಿಸಿದೆ. ದಿಃ 22-11-2017 ರಂದು ವೈದ್ಯರಿಂದ ಆರೋಪಿ ಮತ್ತು ನೊಂದಬಾಲಕಿಯಿಂದ ಸಂಗ್ರಹಿಸಿದ ವಸ್ತುಗಳನ್ನು ಪೇದೆ 399 ರವರ ಮುಖಾಂತರ RFSL ದಾವಣಗೆರೆಗೆ ಕಳುಹಿಸಿಕೊಟ್ಟಿದ್ದು, ಆ ಬಗ್ಗೆ ಸ್ವೀಕೃತಿಯಲ್ಲಿ ಸಹಿಯನ್ನು ನಿಪಿ 15 (ಎ) ಎಂದು ಗುರುತಿಸಲಾಯಿತು. ಅದೇ ದಿನ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಮುಳಬಾಗಿಲು ಪಿಡಬ್ಲ್ಯೂಡಿ ರವರಿಂದ ಪಡೆದುಕೊಂಡಿದ್ದು, ಅದರಲ್ಲಿರುವ ಸಹಿಯನ್ನು ನಿಪಿ 10(ಬಿ) ಮತ್ತು ಪತ್ರದಲ್ಲಿರುವ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು.

ದಿಃ 19-12-2017 ರಂದು ಹನುಮನಹಳ್ಳಿ ಗ್ರಾಮಪಂಚಾಯಿತಿಯಿಂದ ಕೃತ್ಯ ನಡೆದ ಮನೆಯ ಡಿಮ್ಯಾಂಡ್ ರಿಜಿಸ್ಟರ್ ನಕಲು ಮತ್ತು ಅಸೆಸ್‌ಮೆಂಟ್ ನಕಲನ್ನು ಪಡೆದುಕೊಂಡಿದ್ದು,

ಅವುಗಳಲ್ಲಿರುವ ಸಹಿಗಳನ್ನು ನಿಪಿ 12(ಬಿ) ಮತ್ತು ನಿಪಿ 13(ಬಿ) ಎಂದು ಗುರುತಿಸಲಾಯಿತು. ಪತ್ರದಲ್ಲಿ ಸಹಿಯನ್ನು ನಿಪಿ 14 (ಬಿ) ಎಂದು ಗುರುತಿಸಲಾಯಿತು. ದಿ: 21-02-2018 ರಂದು FSL ವರದಿಯನ್ನು ಪಡೆದುಕೊಂಡು ದಿ: 23-03-2018 ರಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. FSL ವರದಿಯನ್ನು ವೈದ್ಯರಿಗೆ ಅಂತಿಮ ಅಭಿಪ್ರಾಯ ಪಡೆಯಲು ಕಳುಹಿಸಿದ್ದು, ದಿ: 04-04-2018 ರಂದು ವೈದ್ಯರು ಅಂತಿಮ ಅಭಿಪ್ರಾಯ ನೀಡಿದ್ದು, ಅದನ್ನು ಸ್ವೀಕರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದೆ. FSL ವರದಿಯಲ್ಲಿನ ಸಹಿಯನ್ನು ನಿಪಿ 8 (ಎ) ಮತ್ತು ಅಂತಿಮ ಅಭಿಪ್ರಾಯದಲ್ಲಿರುವ ಸಹಿಯನ್ನು ನಿಪಿ 9(ಬಿ) ಎಂದು ಗುರುತಿಸಲಾಯಿತು. ದಿ: 28-07-2018 ರಂದು ಜಾಲಪ್ಪ ಆಸ್ಪತ್ರೆಯ ವೈದ್ಯರಿಂದ ಆಕೆಯ ಮೇಲೆ ವಿಷ ಪ್ರಾಶನ ಆಗಿದ್ದ ಬಗ್ಗೆ ದಾಖಲೆಗಳನ್ನು ಪಡೆದುಕೊಂಡೆ. ಆರೋಪಿತರನ್ನು ನೋಡಿದರೆ ಗುರ್ತಿಸುತ್ತೇನೆ.

**ಪಾಟೀ ಸವಾಲು:- ಆರೋಪಿಗಳ ಪರ ಶ್ರೀ ಆರ್‌ಕೆಸಿ ವಕೀಲರಿಂದ :-**

ಈ ಪ್ರಕರಣದ 5ನೇ ಆರೋಪಿ ಅಶ್ವಿನಿ, ಚಾಸಾ 4 ನಾರಾಯಣಸ್ವಾಮಿ ರವರ ಮೇಲೆ ದೂರನ್ನು ಕೊಟ್ಟಿದ್ದರು ಎಂದರೆ ಈ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಈ ಪ್ರಕರಣದ ಆರೋಪಿ ದೊರೆಸ್ವಾಮಿ ಅಶ್ವಿನಿ ರವರ ಗಂಡ ಎಂದರೆ ಸರಿ. ಮೊ.ಸಂಖ್ಯೆ: 240/2011 ಪ್ರಕರಣವನ್ನು ಅತ್ಯಾಚಾರದ ಆರೋಪ ಮಾಡಿ ಸಲ್ಲಿಸಿದ್ದು ಎಂದರೆ ಗೊತ್ತಿಲ್ಲ. ಚಾಸಾ 4 ನಾರಾಯಣಸ್ವಾಮಿ ನೊಂದ ಬಾಲಕಿಯ ಮಾವ ಎಂದರೆ ಸರಿ. ಪ್ರಕರಣದಿಂದ ತಪ್ಪಿಸಿಕೊಳ್ಳುವ ಸಲುವಾಗಿ ನೊಂದ ಬಾಲಕಿಯಿಂದ ಸದರಿ ನಾರಾಯಣಸ್ವಾಮಿ ಈ ಸುಳ್ಳು ಪ್ರಕರಣವನ್ನು ಒತ್ತಡ ಹೇಳಿ ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ, ನೊಂದ ಬಾಲಕಿಯ ಅಕ್ಕನನ್ನು ಸದರಿ ನಾರಾಯಣಸ್ವಾಮಿ ಮದುವೆಯೊಗಿದ್ದಾರೆ ಎಂದರೆ ಸರಿ. ಈ ಎಲ್ಲಾ ಮಾಹಿತಿ ನನಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5ನೇ ಆರೋಪಿ ಅಶ್ವಿನಿ ನಾರಾಯಣಸ್ವಾಮಿಯ ಮೇಲೆ ದೂರು ಕೊಟ್ಟಿದ್ದ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ಮದ್ಯಾಹ್ನ 12.00 ಗಂಟೆಯಾಗಿತ್ತು, ದಿ: 06-10-2017 ರಂದು ಹೋಗಿದ್ದೆ.

ಆಗ ನನ್ನ ಜೊತೆ ಪಂಚರು ಬಂದಿದ್ದರು. ವಿಷ ಕುಡಿಸಿದ್ದು ಎಂದು ಹೇಳುವ ಜಾಗ ಕೆರೆ ಅಂಗಳ. ಆ ಕೆರೆ ಅಂಗಳಕ್ಕೂ ಬೆಟ್ಟಬೆಣಜೇನಹಳ್ಳಿ ಗ್ರಾಮಕ್ಕೆ 150-200 ಮೀಟರ್ ಅಂತರ ಇದೆ. ಊರ ಒಳಗಿನಿಂದ ಕೆರೆ ಅಂಗಳಕ್ಕೆ ಹೋಗಲು ಜಾಗ ಚೆನ್ನಾಗಿದ್ದು, ಜನರು ಬಟ್ಟೆ ಒಗೆಯಲು ಹೋಗುತ್ತಾರೆ. ಸಹಜವಾಗಿ ಆ ಕೆರೆಯಲ್ಲಿ ಹಳ್ಳಿ ಜನರು ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು ಮಾಡುತ್ತಾರೆ ಎಂದರೆ ಇರಬಹುದು. ನಾನು ಸ್ಥಳಕ್ಕೆ ಪರಿಶೀಲನೆಗೆ ಹೋದಾಗ ಆ ಊರಿನ ಗ್ರಾಮಸ್ಥರು ಬಂದಿರಲಿಲ್ಲ. ನಾನು ಹೋದಾಗ ಈ ಕೇಸಿಗೆ ಸಂಬಂಧಪಟ್ಟವರು ಮಾತ್ರ ಬಂದಿದ್ದರು. ಪಂಚರನ್ನು ನಾವೇ ಕರೆದುಕೊಂಡು ಹೋಗಿದ್ದೆವು. ನಾವು ಕರೆದಾಗ ಅವರು ಊರಿನಲ್ಲಿ ಇದ್ದರು. ನಾವೇ ಗ್ರಾಮದಿಂದ ಕೆರೆ ಅಂಗಳಕ್ಕೆ ಪಂಚರನ್ನು ಕರೆದುಕೊಂಡು ಹೋದೆವು.

ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಾನು ಆ ಸ್ಥಳಕ್ಕೆ ಬೇಟಿ ಕೊಟ್ಟಿಲ್ಲ ಮತ್ತು ಅಲ್ಲಿ ಯೂವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಸ್ವ ಇಚ್ಛಾ ಹೇಳಿಕೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ, ಜಾಲಪ್ಪ ಆಸತ್ರೆಯಿಂದ ಯೂವುದೇ ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನೊಂದ ಬಾಲಕಿಗೆ ವಿಷ ಪ್ರಾಶನ ಆಗಿದ್ದ ಬಗ್ಗೆ ಜಾಲಪ್ಪ ಆಸ್ಪತ್ರೆಯಿಂದ ದಾಖಲೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಕಡತದಲ್ಲಿದೆ. ನಾನು FSL ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಶ್ವಿನಿ ರವರು ನಾರಾಯಣಸ್ವಾಮಿ ರವರು ಕೊಟ್ಟ ದೂರಿನಿಂದ ತಪ್ಪಿಸಿಕೊಳ್ಳಲು ನೊಂದ ಬಾಲಕಿಯ ಮೇಲೆ ಒತ್ತಡ ಹಾಕಿ ಸುಳ್ಳು ಪ್ರಕರಣದ ದಾಖಲಿಸುವಂತೆ ಮಾಡಿ ನಾನು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.